All India Radio: Bangalore
National Bulletin In Kannada
19.09.2025 07.35 a.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><><><>

ಮುಖ್ಯಾಂಶಗಳು

೧. ಇದೇ ೨೨ರಿಂದ ಪರಿಷ್ಕೃತ ಜಿಎಸ್‌ಟಿ ದರಗಳ ಜಾರಿ ಹಿನ್ನೆಲೆ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದಿಂದ ಮಾರ್ಗಸೂಚಿ ಬಿಡುಗಡೆ

೨. ೨೦೨೬ ರ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸಲಿರುವ ಭಾರತ - ಕೇಂದ್ರ ಸಚಿವ ಅಶ್ವಿನಿ ವೈ?ವ್

೩. ಎನ್‌ಇಪಿ ೨೦೨೦ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ನೇತೃತ್ವದಲ್ಲಿ ಮೌಲ್ಯಮಾಪನ ಸಭೆ

೪. ಚೀನಾ ಮಾಸ್ಟರ್ಸ್ ಸೂಪರ್ ೭೫೦ ಬ್ಯಾಡ್ಮಿಂಟನ್; ಭಾರತದ ಪಿವಿ ಸಿಂಧು ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ಗೆ ಲಗ್ಗೆ

><><><><><><><

ನೂತನ ಜಿಎಸ್‌ಟಿ ದರಗಳು ಇದೇ ೨೨ರಿಂದ ಜಾರಿಗೆ ಬರಲಿರುವ ಹಿನ್ನೆಲೆಯಲ್ಲಿ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ ನವೀಕೃತ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಇದರ ಪ್ರಕಾರ, ಸೆಪ್ಟೆಂಬರ್ ೨೨ರ ಹಿಂದಿನ ದಿನಾಂಕದಲ್ಲಿ ತಯಾರಾದ ಹಾಗೂ ಇನ್ನೂ ಮಾರಾಟವಾಗದ ಪ್ಯಾಕೇಜ್‌ಗಳ ಮೇಲೆ ತಯಾರಕರು, ಪ್ಯಾಕರ್‌ಗಳು ಅಥವಾ ಆಮದುದಾರರು ಪರಿಷ್ಕೃತ ಬೆಲೆಯ ಸ್ಟಿಕ್ಕರ್‌ಗಳನ್ನು ಅಂಟಿಸಬಹುದಾಗಿದೆ. ಆದರೆ, ಮೂಲ ಬೆಲೆಯ ಮುದ್ರಿತ ಮಾಹಿತಿಯನ್ನು ಮರೆಮಾಚಬಾರದು ಎಂದು ಸ್ಪಷ್ಟಪಡಿಸಲಾಗಿದೆ. ಪರಿಷ್ಕೃತ ಬೆಲೆಯ ಸ್ಟಿಕ್ಕರ್ ಅಂಟಿಸುವುದು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಿರುವ ಸಚಿವಾಲಯ, ಪರಿಷ್ಕೃತ ಬೆಲೆ ಪ್ರಕಟಿಸಲು ಬಯಸುವ ಕಂಪನಿಗಳಿಗೆ ಇದು ಐಚ್ಛಿಕವಾಗಿದೆ ಎಂದಿದೆ.

ಜಿಎಸ್‌ಟಿ ದರ ಬದಲಾವಣೆಗೆ ಮೊದಲು ಮುದ್ರಿತ ಹಳೆಯ ಪ್ಯಾಕಿಂಗ್ ವಸ್ತುಗಳು ಅಥವಾ ಪ್ಯಾಕೇಜ್‌ಗಳನ್ನು ಮಾರ್ಚ್ ೨೦೨೬ರ ವರೆಗೆ ಅಥವಾ ಸ್ಟಾಕ್ ಮುಗಿಯುವವರೆಗೆ ಬಳಸಲು ಅವಕಾಶ ನೀಡಲಾಗಿದೆ. ಇಂತಹ ಪ್ಯಾಕೇಜ್‌ಗಳ ಮೇಲೆ ಹೊಸ ಎಂಆರ್‌ಪಿಅನ್ನು ಸ್ಟಾಂಪ್, ಸ್ಟಿಕ್ಕರ್ ಅಥವಾ ಆನ್ಲೈನ್ ಮುದ್ರಣದ ಮೂಲಕ ಸರಿಪಡಿಸಬಹುದಾಗಿದೆ. ತಯಾರಕರು, ಪ್ಯಾಕರ್‌ಗಳು ಮತ್ತು ಆಮದುದಾರರು ಜಿಎಸ್‌ಟಿ ಬದಲಾವಣೆಗಳ ಕುರಿತು ಡೀಲರ್‌ಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು ಗ್ರಾಹಕರಿಗೆ ಮಾಹಿತಿಯನ್ನು ನೀಡಬೇಕು ಎಂದು ಸರ್ಕಾರ ಸಲಹೆ ನೀಡಿದೆ.

><><><><><><

ತೆರಿಗೆ ರಚನೆಯನ್ನು ಸರಳಗೊಳಿಸುವ ಮತ್ತು ನಾಗರಿಕರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿ, ಹೊಸ ತೆರಿಗೆ ದರಗಳು ಸೋಮವಾರದಿಂದ ಜಾರಿಗೆ ಬರಲಿವೆ. ಸಾಮಾನ್ಯ ಜನರಿಗೆ ದೊಡ್ಡ ಪರಿಹಾರವಾಗಿ, ಜಿಎಸ್‌ಟಿ ಸಮಿತಿ ದ್ವಿಚಕ್ರ ವಾಹನಗಳು ಮತ್ತು ಸಣ್ಣ ಕಾರುಗಳ ಮೇಲಿನ ತೆರಿಗೆ ದರಗಳಲ್ಲಿ ಪ್ರಮುಖ ಕಡಿತವನ್ನು ಘೋಷಿಸಿದೆ. ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳ ಅಡಿಯಲ್ಲಿ, ಸರ್ಕಾರವು ೩೫೦ ಸಿಸಿ ವರೆಗಿನ ದ್ವಿಚಕ್ರ ವಾಹನಗಳ ಮೇಲಿನ ಜಿಎಸ್‌ಟಿ ದರಗಳನ್ನು ಶೇಕಡಾ ೨೮ ರಿಂದ ಶೇಕಡಾ ೧೮ ಕ್ಕೆ ಇಳಿಸಿದೆ. ಜಿಎಸ್‌ಟಿ ಕಡಿತವು ಕೆಳ ಹಾಗೂ ಮಧ್ಯಮ ವರ್ಗದ ಕುಟುಂಬಗಳು, ಯುವ ವೃತ್ತಿಪರರು ಮತ್ತು ತಮ್ಮ ಜೀವನೋಪಾಯ ಮತ್ತು ದೈನಂದಿನ ಅಗತ್ಯಗಳಿಗಾಗಿ ಕೈಗೆಟುಕುವ ಸಾರಿಗೆಯನ್ನು ಅವಲಂಬಿಸಿರುವ ಜನರಿಗೆ ಪರಿಹಾರವನ್ನು ನೀಡುತ್ತದೆ ಈ ನಡಿವೆ, ಸಣ್ಣ ಕಾರುಗಳ ಮೇಲಿನ ಜಿಎಸ್‌ಟಿಯನ್ನು ಶೇಕಡಾ ೧೮ ಕ್ಕೆ ಇಳಿಸಲಾಗಿದೆ. ಈ ಕ್ರಮವು ಮಧ್ಯಮ ವರ್ಗದ ಕುಟುಂಬಗಳಿಗೆ ಕಾರುಗಳನ್ನು ಕೈಗೆಟುಕುವಂತೆ ಮಾಡುತ್ತದೆ ಮತ್ತು ಇದರಿಂದಾಗಿ ಆಟೋಮೊಬೈಲ್ ವಲಯವನ್ನು ಉತ್ತೇಜಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಜಿಎಸ್‌ಟಿಯನ್ನು ಕಡಿಮೆ ಮಾಡುವ ಮೂಲಕ, ಈ ಕ್ರಮವು ಉತ್ಪಾದನೆ, ಮಾರಾಟ, ಸೇವೆಗಳು ಮತ್ತು ಹಣಕಾಸು ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗಲಿದ್ದು, ಇದು ದೇಶದ ಬೆಳವಣಿಗೆಯ ವೇಗವನ್ನು ಬಲಪಡಿಸುತ್ತದೆ.

><><><><><><

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣೆ - ಡಿಪಿಡಿಪಿ ನಿಯಮಗಳನ್ನು ಅಂತಿಮಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಪ್ರಕಟಣೆಗೆ ಸಿದ್ಧವಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ ೨೦೨೬ ರ ಲಾಂಛನ ಮತ್ತು ಪ್ರಮುಖ ಚಟುವಟಿಕೆಗಳನ್ನು ಬಿಡುಗಡೆ ಮಾಡುವಾಗ ಸಚಿವರು ಈ ವಿಷಯ ತಿಳಿಸಿದರು. ಈ ಸಂಪೂರ್ಣ ಚೌಕಟ್ಟನ್ನು ರೂಪಿಸಲು ಬಹಳ ದೀರ್ಘ ಅವಧಿಯಲ್ಲಿ ೩ ಸಾವಿರಕ್ಕೂ ಹೆಚ್ಚು ಸಮಾಲೋಚನೆಗಳನ್ನು ನಡೆಸಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಭಾರತವು ಪ್ರಸ್ತುತ ೩೮ ಸಾವಿರ ಜಿಪಿಯುಗಳನ್ನು ಹೊಂದಿದೆ ಮತ್ತು ಮುಂದಿನ ದಿನಗಳಲ್ಲಿ ಹೆಚ್ಚಿನ ಜಿಪಿಯುಗಳು ಲಭ್ಯವಿರುತ್ತವೆ. ೫೦೦ ಕ್ಕೂ ಹೆಚ್ಚು ದತ್ತಾಂಶ ಮತ್ತು ಎಐ ಲ್ಯಾಬ್‌ಗಳ ವಿಸ್ತರಣೆಯು ಸಮಗ್ರ ಬೆಳವಣಿಗೆ, ಕೈಗೆಟಕುವ ತಂತ್ರಜ್ಞಾನ ಮತ್ತು ಎಐ ಹಾಗೂ ವಿದ್ಯುನ್ಮಾನ ವಲಯದಲ್ಲಿ ಜಾಗತಿಕ ನಾಯಕತ್ವಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಸಚಿವರು ತಿಳಿಸಿದರು. ಎಐ ಮಿ?ನ್ ದೇಶದಲ್ಲಿ ಉತ್ತಮ ಪ್ರಗತಿ ಸಾಧಿಸಿದೆ. ಮುಂದಿನ ವ? ಭಾರತವು ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸಲಿದೆ ಎಂದು ಸಚಿವರು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರು ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ ಮತ್ತು ವಿವಿಧ ದೇಶಗಳ ನಾಯಕರು ಇದರಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವ ವೈಷ್ಣವ್ ಹೇಳಿದರು.

ಧ್ವನಿ: ಅಶ್ವಿನಿ ವೈಷ್ಣವ್

><><><><><><

ರಾಷ್ಟ್ರೀಯ ಶಿಕ್ಷಣ ನೀತಿ-ಎನ್‌ಇಪಿ ೨೦೨೦ಯನ್ನು ಶಾಲಾ ಶಿಕ್ಷಣದ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನೇತೃತ್ವದಲ್ಲಿ ಮೌಲ್ಯಮಾಪನ ಸಭೆ ನಡೆಯಿತು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಸಚಿವರು, ಶಿಕ್ಷಣ ಸಚಿವಾಲಯ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸಲು, ಅಧ್ಯಯನವನ್ನು ಹೆಚ್ಚು ಸಂತೋಷದಾಯಕ ಮತ್ತು ವಿದ್ಯಾರ್ಥಿ ಕೇಂದ್ರಿತವಾಗಿಸಲು ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ದೇಶದ ಎಲ್ಲಾ ಮಕ್ಕಳಿಗೂ ವಿಶ್ವಮಟ್ಟದ ಶಾಲಾ ಶಿಕ್ಷಣವನ್ನು ಒದಗಿಸಲು ಸಚಿವಾಲಯ ಬದ್ಧವಾಗಿದೆ.

ಮಕ್ಕಳೇ 'ವಿಕಸಿತ ಮತ್ತು ಸಮೃದ್ಧ ಭಾರತ' ನಿರ್ಮಾಣದ ಚಾಲಕ ಶಕ್ತಿಯಾಗಿದ್ದಾರೆ. ಆದ್ದರಿಂದ, ದೇಶದ ಪ್ರತಿಯೊಬ್ಬ ವಿದ್ಯಾರ್ಥಿಗೂ ಎನ್‌ಇಪಿ ೨೦೨೦ರ ದೂರದರ್ಶಿ ಪರಿಣಾಮ ಲಭಿಸಬೇಕು ಎಂದು ಸಚಿವರು ಹೇಳಿದ್ದಾರೆ.

><><><><><><

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ಈ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರವು ಮಹಿಳಾ ಸಬಲೀಕರಣವನ್ನು ಹೇಗೆ ಉತ್ತೇಜಿಸಿದೆ ಎಂಬುವುದರ ಕುರಿತ ಒಂದು ವಿಶೇಷ ವರದಿ ಇಲ್ಲಿದೆ.

ವರದಿ:

ಕಳೆದ ೧೧ ವ?ಗಳಲ್ಲಿ, ಕೇಂದ್ರ ಸರ್ಕಾರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಕಾನೂನು ಕ್ಷೇತ್ರಗಳಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಸಮಗ್ರ ನೀತಿ ಚೌಕಟ್ಟನ್ನು ಅಳವಡಿಸಿಕೊಂಡಿದೆ. "ನಾರಿ ಶಕ್ತಿ" ಈಗ ಒಂದು ರಾಷ್ಟ್ರೀಯ ಧ್ಯೇಯವಾಗಿದ್ದು, ನಗರ ಅಥವಾ ಗ್ರಾಮೀಣ, ಯುವ ಅಥವಾ ವೃದ್ಧ ಪ್ರತಿಯೊಬ್ಬ ಮಹಿಳೆಯೂ ಘನತೆ, ಸುರಕ್ಷತೆ ಮತ್ತು ಸ್ವಾವಲಂಬನೆಯಿಂದ ಬದುಕಲು ಸಬಲೀಕರಣಗೊಳಿಸುತ್ತಿದೆ. ತಾರತಮ್ಯದ ವಿರುದ್ಧ ಸಾಂವಿಧಾನಿಕ ರಕ್ಷಣೆ ಮತ್ತು ಕಾನೂನುಗಳಿಂದ, ಪರಿವರ್ತನಾತ್ಮಕ ಯೋಜನೆಗಳವರೆಗೆ, ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ ದೇಶ ಸಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಹರಿಯಾಣದಲ್ಲಿ ಬೀಮಾ ಸಖಿ ಯೋಜನೆಯನ್ನು ಪ್ರಾರಂಭಿಸುತ್ತಾ ಪ್ರಧಾನಿ ನರೇಂದ್ರ ಮೋದಿ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯು ರಾಷ್ಟ್ರೀಯ ಮಟ್ಟದಲ್ಲಿ ಜನನ ಲಿಂಗ ಅನುಪಾತವು ೨೦೧೪-೧೫ ರಲ್ಲಿ ೯೧೮ ರಿಂದ ೨೦೨೩-೨೪ ರಲ್ಲಿ ೯೩೦ ಕ್ಕೆ ಸುಧಾರಿಸಿರುವುದರಿಂದ ಅಪೇಕ್ಷಿತ ಫಲಿತಾಂಶವನ್ನು ನೀಡಿದೆ. ಜನವರಿ ೨೦೧೫ ರಲ್ಲಿ ಪ್ರಾರಂಭಿಸಲಾದ ಸುಕನ್ಯಾ ಸಮೃದ್ಧಿ ಯೋಜನೆ ಭಾರತದಾದ್ಯಂತ ಲಕ್ಷಾಂತರ ಯುವತಿಯರಿಗೆ ಭರವಸೆ ಮತ್ತು ಸಬಲೀಕರಣದ ಕಿರಣವಾಗಿ ನಿಂತಿದೆ ಎಂದು ಹೇಳಿದ್ದರು ಸರ್ಕಾರವು ಲಖ್ಪತಿ ದೀದಿ ಉಪಕ್ರಮವನ್ನು ಸಹ ಜಾರಿಗೆ ತಂದಿದೆ, ಇದು ಸ್ವ-ಸಹಾಯ ಗುಂಪುಗಳ ಮಹಿಳೆಯರು ಸುಸ್ಥಿರ ಆಧಾರದ ಮೇಲೆ ವಾರ್ಷಿಕವಾಗಿ ಕನಿಷ್ಠ ಒಂದು ಲಕ್ಷ ರೂಪಾಯಿಗಳ ಆದಾಯವನ್ನು ಗಳಿಸುವಂತೆ ಸಬಲೀಕರಣಗೊಳಿಸುವುದು ಮತ್ತು ಸಕ್ರಿಯಗೊಳಿಸುತ್ತದೆ.

ತಳಮಟ್ಟದ ಆಡಳಿತದಿಂದ ರಕ್ಷಣಾ ಪಡೆಗಳು ಮತ್ತು ವಾಯುಯಾನದವರೆಗಿನ ಕ್ಷೇತ್ರಗಳಲ್ಲಿ ಮಹಿಳೆಯರು ಮುನ್ನಡೆಸುತ್ತಿದ್ದಾರೆ ಹಾಗೂ ಅಂತರ್ಗತ ಮತ್ತು ಸುಸ್ಥಿರ ರಾಷ್ಟ್ರೀಯ ಬೆಳವಣಿಗೆಗೆ ಕಾರಣರಾಗಿದ್ದಾರೆ.

><><><><><><><

ಭಾರತದ ಖ್ಯಾತ ಶಟ್ಲರ್ ಪಿವಿ ಸಿಂಧು ಶೆನ್ಜೆನ್‌ನಲ್ಲಿ ನಡೆಯುತ್ತಿರುವ ಚೀನಾ ಮಾಸ್ಟರ್ಸ್ ಸೂಪರ್ ೭೫೦ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಸಿಂಧು ಥೈಲ್ಯಾಂಡ್‌ನ ಪೋರ್ನ್‌ಪಾವೀ ಚೋಚುವಾಂಗ್ ಅವರನ್ನು ೨೧-೧೫, ೨೧-೧೫ ಅಂತರದಿಂದ ಸೋಲಿಸಿದರು. ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಜೂಲಿ ಜಾಕೋಬ್ಸೆನ್ ವಿರುದ್ಧ ೨೧-೫, ೨೧-೧೦ ಅಂತರದಲ್ಲಿ ಪ್ರಾಬಲ್ಯ ಸಾಧಿಸಿದ ನಂತರ ಸಿಂಧು ಪಂದ್ಯಾವಳಿಯಲ್ಲಿ ಸತತ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದರು. ಭಾರತದ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ.

><><><><><><><

ಅರ್ಹ ಕೇಂದ್ರ ಸರ್ಕಾರಿ ನೌಕರರು ಮತ್ತು ಹಿಂದಿನ ನಿವೃತ್ತರು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ-ಎನ್‌ಪಿಎಸ್ ನಿಂದ ಏಕೀಕೃತ ಪಿಂಚಣಿ ಯೋಜನೆ-ಯುಪಿಎಸ್ ಗೆ ಬದಲಾಯಿಸಲು ಹಣಕಾಸು ಸಚಿವಾಲಯ ಸೆಪ್ಟೆಂಬರ್ ೩೦ ಕೊನೆಯ ದಿನವೆಂದು ಘೋಷಿಸಿದೆ.

><><><>END<><><><